5407(6046) ಶ್ರೀ ಪಾಟೀಲ್ ಡಿ.ಆರ್. (ಗದಗ್) : ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ 2 ವರ್ಷಗಳಲ್ಲಿ ಕರ್ನಾಟಕ ಸರ್ಕಾರ ನಡೆಸುವ ಲಾಟರಿಗಳಿಂದ ಸಂಗ್ರಹಿಸಲಾಗಿರುವ ಹಣ ಎಷ್ಟು? (ವರ್ಷಾವಾರು ವಿವರ ನೀಡುವುದು)

ಆ) ಈ ವ್ಯವಸ್ಥೆ ನಡೆಸಲು ವೆಚ್ಚವಾದ ಹಣ ಎಷ್ಟು? (ವರ್ಷಾವಾರು ವಿವರ ನೀಡುವುದು);

ಇ) ಈ ವ್ಯವಸ್ಥೆಯಿಂದ ಎಲ್ಲ ವೆಚ್ಚಗಳನ್ನು ತೆಗೆದು ಸರ್ಕಾರಕ್ಕೆ ಬಂದ ನಿವ್ವಳ ಆದಾಯ ಎಷ್ಟು? (ವರ್ಷಾವಾರು ವಿವರ ನೀಡುವುದು);

ಈ) ಒಂದು ರೀತಿ ಜೂಜಿನ ಮನೋಭಾವ ಬೆಳೆಸುವ, ಶ್ರಮವಿಲ್ಲದ ಗಳಿಕೆಗೆ ಅಸೆಪಡುವ ಸ್ಥಿತಿ ನಿರ್ಮಿಸುವ ವ್ಯಸನವಾಗಿರುವ ಲಾಟರಿ ನಿಲ್ಲಿಸಲು ಸರ್ಕಾರ ಕ್ರಮಕ್ಕೈಗೊಳ್ಳುವುದೇ?

ಶ್ರೀ ಬಸವರಾಜ ಎಸ್. ಹೊರಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಕಳೆದ 2 ವರ್ಷಗಳಲ್ಲಿ ಕರ್ನಾಟಕ ಸರ್ಕಾರ ನಡೆಸುವ ಲಾಟರಿಗಳ ವಹಿವಾಟಿನಿಂದ ಸಂಗ್ರಹಿಸಲಾದ ಹಣ ಈ ಕೆಳಕಂಡಂತೆ ಇರುತ್ತದೆ.

2003–3004, ರೂ. 1360.29 ಕೋಟಿ

2004–2005, ರೂ. 2102.52 ಕೋಟಿ

ಆ) ಕರ್ನಾಟಕ ರಾಜ್ಯ ಲಾಟಿ ಬಹುಮಾನ ಪಾವತಿ ಏಜೆಂಟ್‌ರ ಕಮಿಷನ್, ಟಿಕೇಟ್ ಮುದ್ರಣ, ತೆರಿಗೆ ಹಾಗೂ ಇತರೆ ವೆಚ್ಚಗಳನ್ನೊಳಗೊಂಡಂತೆ ಈ ವ್ಯವಸ್ಥೆ ನಡೆಸಲು ಆದ ವೆಚ್ಚದ ವಿವರ ಈ ಕೆಳಕಂಡಂತಿದೆ.

2003–3004, ರೂ. 1310.29 ಕೋಟಿ

2004–2005, ರೂ. 2012.52 ಕೋಟಿ

ಇ) ಕರ್ನಾಟಕ ರಾಜ್ ಲಾಟರಿಯಿಂದ ಸರ್ಕಾರಕ್ಕೆ ಬಂದ ವರ್ಷಾವಾರು ನಿವ್ವಳ ಆದಾಯ ಈ ಕೆಳಕಂಡಂತೆ ಇರುತ್ತದೆ.

2003–3004, ರೂ. 50.00 ಕೋಟಿ

2004–2005, ರೂ. 90.00 ಕೋಟಿ

ಈ) ಸಧ್ಯಕ್ಕೆ ಇಲ್ಲ

5408(6291) ಶ್ರೀ ಪಾಟೀಲ್ ಡಿ.ಆರ್. (ಗದಗ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಒಂದು ದಶಕದಲ್ಲಿ ಪೊಲೀಸ್ ಸಿಬ್ಬಂದಿಯಲ್ಲಿ ಆದ ಹೆಚ್ಚಳ ಎಷ್ಟು: (ಗ್ರೇಡ್‌ವಾರು, ಜಿಲ್ಲಾವಾರು ಮಾಹಿತಿ ನೀಡುವುದು):

ಆ) ಜಿಲ್ಲೆಗಳಲ್ಲಿ ಕಳೆದ ಒಂದು ದಶಕದಲ್ಲಿ ಅಪರಾಧದ ಸಂಖ್ಯೆಯಲ್ಲಿ ಆದ ಹೆಚ್ಚಳ ಎಷ್ಟು (ಜಿಲ್ಲಾವಾರು ಅಪರಾಧವಾರು ಮಾಹಿತಿ ನೀಡುವುದು);

ಇ) ಮಾಹಿತಿ ಮತ್ತು ಇತರೆ ತಂತ್ರಜ್ಞಾನದಲ್ಲಿ ಆಗಿರುವ ಬೆಳೆವಣಿಗೆಯ ಹಿನ್ನೆಲೆಯಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗುವ ರೀತಿಯಲ್ಲಿ ವ್ಯವಸ್ಥೆಯಲ್ಲಿ ತಂದಿರುವ ಬದಲಾವಣೆಗಳು ಯಾವುವು: